# <u>ಕಡಗೋಲ ತಾರೆನ್ನ ಚಿನ್ನವೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 167.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಬಿಲಹರಿ ತಾಳ: ಆದಿ

ಕಡಗೋಲ ತಾರೆನ್ನ ಚಿನ್ನವೇ ಮೊಸ-
ರೊಡೆದರೆ ಬೆಣ್ಣೆ ಬಾರದು ರನ್ನವೇ || ಪ ||

ಅಣ್ಣನ ಒಡಗೊಂಡು ಬಾರಯ್ಯ, ಸವಿ ಸವಿ
ಬೆಣ್ಣೆಯ ಮುದ್ದೆಯ ಮೆಲುವಿರಂತೆ
ಬಣ್ಣಸರವ ನಿನ್ನ ಕೊರಳಿಗೆ ಹಾಕುವೆ
ಚಿಣ್ಣರೊಡನೆ ಆಡ ಕಳುಹುವೆ, ರಂಗ || ೧ ||

ಪುಟ್ಟ ಬೂಚಿಯ ತಂದು ನಿನ್ನಯ
ತೊಟ್ಟಿಲ ಕಾಲಿಗೆ ಕಟ್ಟಿಡುವೆ
ಬಟ್ಟಲು ತುಂಬಿದ ಸಕ್ಕರೆ ನಿನಗೀವೆ
ಕಟ್ಟಾಣಿ ಮುತ್ತಿನ ಖಣಿಯೇ, ಬಾ ರಾಮ || ೨ ||

ಬಡವರ ಭಾಗ್ಯದ ನಿಧಿಯೇ ಗೋಕುಲದ ಎ-
ನ್ನೊಡೆಯ ಮಕ್ಕಳ ಮಾಣಿಕವೇ
ಕೊಡು ಮುದ್ದು ಪುರಂದರ ವಿಠಲ ಕೃಷ್ಣಯ್ಯ, ನೀ ಪಂ-
ಗಡಲೊಳು ದುಡುಕು ಮಾಡುವರೇನೊ ರಂಗ || ೩ ||

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, Kadagolu, mosaru, benne, ADu, ATa, ranga, boochi, sakkare, rama, badava, Bhagya, gokula, makkalu, Samudra, gopi,
**Pravachana:** NA
**Explanation:** NA